# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ66/2024

**ಪಿ.ಡಬ್ಲ್ಯೂಃ2 (ಸಿಡಬ್ಲ್ಯೂಃ 2 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಈಶ್ವರ** |
| **ತಂದೆಯ ಹೆಸರು** | : | **ಎರಿಸ್ವಾಮಿ** |
| **ವಯಸ್ಸು** | : | **34 ವರ್ಷ** |
| **ಕೆಲಸ** | : | **ಖಾಸಗಿ ಕೆಲಸ** |
| **ವಾಸ ಸ್ಥಳ** | : | **ಬಿಸಿಲಹಳ್ಳಿ ಗ್ರಾಮ** |

**ಸಾಕ್ಷಿಯನ್ನು ದಿನಾಂಕ 29.11.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.2(ಎ )** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 3.5.2024 ರಂದು ಬಿಸಿಲಹಳ್ಳಿಯಲ್ಲಿ ಪೊಲೀಸರು ತಾಯಪ್ಪ ಕೊಲೆಯಾದ ವಿಷಯಕ್ಕೆ ಸಂಬಂಧಿಸಿದಂತೆ ಪಂಚನಾಮೆಗೆ ಬಂದಿದ್ದರು. ಪಂಚನಾಮೆ ಕಾಲಕ್ಕೆ ನಾನು, ನಾಗರಾಜ ಮತ್ತು ರತ್ನಮ್ಮ ಇದ್ದೆವು. ಪೊಲೀಸರಿಗೆ ಸ್ಥಳವನ್ನು ರತ್ನಮ್ಮ ತೋರಿಸಿದ್ದಾರೆ.

**2.** ಪೊಲೀಸರು ಕಾಂಪೌಂಡ್ ಒಳಗೆ ಬಂಡೆ ಮೇಲೆ ಬಿದ್ದ ರಕ್ತ , ಗೋಡೆಯ ಮೇಲೆ ಬಿದ್ದ ರಕ್ತ ಮತ್ತು ಮಣ್ಣನ್ನು ತೆಗೆದುಕೊಂಡಿದ್ದಾರೆ. ನಿಪಿ.3 ನಕ್ಷೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನುನಿಪಿ.3 ಎ ಎಂದು ಗುರುತಿಸಲಾಯಿತು. ನಿಪಿ.4 ಫೋಟೋದಲ್ಲಿ ನಾನು , ರತ್ನಮ್ಮ , ನಾಗರಾಜ ಮತ್ತು ಪೊಲೀಸರು ಕಂಡು ಬರುತ್ತೇವೆ. ಸ್ಥಳದಿಂದ ಪೊಲೀಸರು ಶೇಖರಿಸಿದ ರಕ್ತ ಮತ್ತು ಮಣ್ಣನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಎಂಒ 4 ರಿಂದ 6 ಎಂದು ಗುರುತಿಸಲಾಗಿದೆ. ಎಂಒ 4 ರಿಂದ 6 ರ ಮೇಲೆ ನನ್ನ ಮತ್ತು ನಾಗರಾಜನ ಸಹಿ ಕಂಡು ಬರುತ್ತದೆ.

**ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೇಳಿದ್ದಾರೆ. ಸಕಾರಣಗಳು ಇಲ್ಲದೆಇರುವುದರಿಂದ ಕೋರಿಕೆಯನ್ನು ನಿರಾಕರಿಸಲಾಗಿದೆ ಮತ್ತು ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಆರ್.ಎಸ್ಃವಕೀಲರಿಂದ:**

**3.** ರತ್ನಮ್ಮ ನನ್ನ ಅತ್ತಿಗೆ . ಮೃತ ತಾಯಪ್ಪ ನನ್ನ ಅಣ್ಣ . ನಿಪಿ.4 ಫೋಟೋ ದಲ್ಲಿ ಪೊಲೀಸರು ರಕ್ತ ತೆಗೆದುಕೊಳ್ಳುವುದು ಕಾಣುತ್ತಿಲ್ಲ. ಪಂಚನಾಮೆ ಕೊಲೆಯಾದ ಸ್ಥಳದಲ್ಲಿ ಬರೆದಿದ್ದಾರೆ. ನಿಂಗಪ್ಪ ಎಲ್ಲಿಂದ ಬಂದ, ನನ್ನ ಅಣ್ಣ ಎಲ್ಲಿ ನಿಂತಿದ್ದ ಮತ್ತು ಆತನನ್ನು ಎಲ್ಲಿ ಹಿಡಿದುಕೊಂಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಕೊಲೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

**S.C.No.66/2024**
**P.W.2 (C.W.2 )**
**Date : 29.11.2025**

**4.** ನನ್ನ ಅಣ್ಣನ ಮನೆಯ ಸುತ್ತ ಮುತ್ತ ಸಾಕಷ್ಟು ಮನೆಗಳು ಇವೆ. ಪಂಚನಾಮೆಗೆ ಬನ್ನಿ ಎಂದು ಪೊಲೀಸರು ನನಗೆ ನೋಟಿಸ್ ನೀಡಿಲ್ಲ. ನಾನು ಸ್ಥಳ ಪಂಚನಾಮೆಯಲ್ಲಿ ಭಾಗವಹಿಸಿಲ್ಲ ಎನ್ನುವುದು ಸರಿಯಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**